**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 16.07.2024.**

**ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ವಿ.ಆರ್.ವಿ. ಪ್ರತಿವಾದಿ ಪರ ವಕೀಲರಿಂದ**

1 ನೇ ಪ್ರತಿವಾದಿಯು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 8 ನಿಯಮ 1(ಎ) ರಂತೆ ಅರ್ಜಿಯ ಜೊತೆಗೆ ಅದರಲ್ಲಿ ಹೇಳಿರುವಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ವಾದಿ ಪರ ವಕೀಲರು ಸದರಿ ಅರ್ಜಿಯನ್ನು ಖರ್ಚಿನೊಂದಿಗೆ ಮಾನ್ಯ ಮಾಡಬಹುದೆಂದು ಹೇಳಿರುತ್ತಾರೆ. ಆದುದರಿಂದ, ಸದರಿ ಅರ್ಜಿಯನ್ನು ರೂ.300/- ಖರ್ಚಿನೊಂದಿಗೆ ಮಾನ್ಯ ಮಾಡಲಾಯಿತು.

ನಾನು ನಡುವಲಹಳ್ಳಿ ಗ್ರಾಮದ ಸ.ನಂ.40 ಕ್ಕೆ ಸಂಬಂಧಪಟ್ಟ ಗಣಕೀಕೃತ ಪಹಣಿ ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ, ಅದನ್ನು **ನಿಡಿ-15** ಎಂದು ಗುರುತಿಸಲಾಯಿತು.

ನನ್ನ ಮಗ ಶಿವಾನಂದರವರ ಗೌರಿಬಿದನೂರು ತಹಶೀಲ್ದಾರ್ ಕಛೇರಿಗೆ ನೀಡಿದ ಅರ್ಜಿಯ ಸ್ವೀಕೃತ ಪ್ರತಿಯನ್ನು ನಾನು ಹಾಜರುಪಡಿಸುತ್ತಿದ್ದೇನೆ, ಅದನ್ನು **ನಿಡಿ-16** ಎಂದು ಗುರುತಿಸಲಾಯಿತು.

ನಾನು ಒಂದು ಸ್ವೀಕೃತಿ ಮತ್ತು ಅರ್ಜಿ ಶುಲ್ಕ ರಶೀದಿಯನ್ನು ಹಾಜರುಪಡಿಸುತ್ತಿದ್ದೇನೆ, ಅವುಗಳನ್ನು ಕ್ರಮವಾಗಿ **ನಿಡಿ-17 ಮತ್ತು 18** ಎಂದು ಗುರುತಿಸಲಾಯಿತು.

ಆದುದರಿಂದ, ವಾದಿಯ ದಾವೆಯನ್ನು ವಜಾಗೊಳಿಸಬೇಕೆಂದು ಪರವಾಗಿ ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲು : ಶ್ರೀ ಆರ್.ವಿ.ಜಿ. ವಾದಿ ಪರ ವಕೀಲರಿಂದ</u>**

ಸ.ನಂ.40 ಸರ್ಕಾರಿ ಜಮೀನು ಎಂದರೆ ಸರಿ. ಸರ್ಕಾರದಿಂದ ಜಮೀನು ಈಗಾಗಲೇ ನನಗೆ ಮಂಜೂರಾಗಿದೆ ಎಂದರೆ ಸರಿ. ಸ.ನಂ.39 ರ ಪೂರ್ವಕ್ಕೆ ಸ.ನಂ.40 ಇದೆ ಎಂದರೆ ಸರಿ. ಸ.ನಂ.40 ರ ಸ್ವತ್ತು ನನಗೆ ಈಗಾಗಲೇ ಮಂಜೂರಾಗಿದ್ದು ಮಗನ ಹೆಸರಿನಲ್ಲಿ ಅರ್ಜಿ ಸಲ್ಲಿಸಲಾಗಿತ್ತು ಎಂದರೆ ಸರಿ. ಸ.ನಂ.40 ಮೊದಲಿನಿಂದ ಸರ್ಕಾರಿ ಹೆಸರಿನಲ್ಲಿ ನಮೂದಾಗಿದೆ ಎಂದರೆ ಸರಿ.

ಸ.ನಂ.39 ರ ರಸ್ತೆ ನಂತರ ಸ.ನಂ.39 ರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನನ್ನು ಬಿಡುಗಡೆ ಮಾಡಿಸಿಕೊಳ್ಳಬೇಕೆಂಬ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.39 ರ ರಸ್ತೆ ನಂತರದ ಜಮೀನನ್ನು ನಾನು ಒತ್ತುವರಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಗೌರಿಬಿದನೂರು